ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ॥ ವೈ.ಎ ನಾರಾಯಣ ಸ್ವಾಮಿ ರವರು ರೈತರು ಬೆಳೆದ ಬೆಳೆಯನ್ನು ಒಳ್ಳೆಯ ಬೆಲೆಗೆ ಮಾರಾಟ ಮಾಡಲು ಹಾಗೂ ಧಾನ್ಯಗಳನ್ನು ಸಂರಕ್ಷಿಸಲು ಕರ್ನಾಟಕ ರಾಜ್ಯ ಉಗ್ರಾಣ ನಿಗಮದಲ್ಲಿ ಉಗ್ರಾಣಗಳನ್ನು ನಿರ್ಮಿಸಿ ರೈತರಿಗೆ ಅನುಕೂಲ ಮಾಡುವ ಬಗ್ಗೆ ನಿಯಮ –72 ರಡಿಯಲ್ಲಿ ಕೋರಿರುವ ಪ್ರಶ್ನೆಗೆ ಉತ್ತರ:-

ಕೃಷಿ ಉತ್ಪನ್ನಗಳನ್ನು ದಾಸ್ತಾನು ಮಾಡಲು ಸ್ಥಳದ ಕೊರತೆ ಇದ್ದುದರಿಂದ, 2015-16 ನೇ ಸಾಲಿನ ಸಚಿವ ಸಂಪುಟದ ನಿರ್ಣಯದ ಮೂಲಕ WIF & NWS ಯೋಜನೆಯಡಿಯಲ್ಲಿ ನಬಾರ್ಡ್‌ನಿಂದ ರೂ. 500 ಕೋಟಿ ಸಾಲ ತೆಗೆದುಕೊಂಡು 14.09 ಲಕ್ಷ ಮೆ.ಟನ್ ಸಾಮರ್ಥ್ಯದ ಉಗ್ರಾಣಗಳನ್ನು ನಿರ್ಮಿಸಲು ಅನುಮೋದನೆ ಪಡೆಯಲಾಗಿತ್ತು.

ಜೊತೆಗೆ, RIDF ಅಡಿಯಲ್ಲಿ ರೂ. 55.00 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 89 ಉಗ್ರಾಣ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲು ಅನುಮೋದನೆ ನೀಡಿ, ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲು ಅನುಮೋದನೆ ದೊರೆತ ಹಿನ್ನೆಲೆಯಲ್ಲಿ ಟೆಂಡರ್ ಮೂಲಕ ಎರಡೂ ಅನುಮೋದನೆಗಳಲ್ಲಿ ಒಳಗೊಂಡ ಕಾಮಗಾರಿಗಳನ್ನು ಸೇರಿಸಿ ಒಟ್ಟಿಗೆ ರೂ.795.97 ಕೋಟಿಗಳ ವೆಚ್ಚದಲ್ಲಿ 9 ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು, ಮೆ॥ ಸೋಮ ಎಂಟರ್‌ಪ್ರೈಸಸ್‌ರವರಿಗೆ ದಿನಾಂಕ: 17.05.2016 ರಂದು ಕಾರ್ಯಾದೇಶ ನೀಡಲಾಗಿತ್ತು.

ಯೋಜನೆ ಅನುಷ್ಠಾನ ಸಮಯದಲ್ಲಿ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್.ಗಳನ್ನು ರೂ. 207.99 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಕೆಲವು ಕಡೆ ಸೂಕ್ತ ಜಮೀನುಗಳ ಅಲಭ್ಯತೆಯಿಂದ, ಪ್ರಸ್ತುತ WIF & NWS 2015-16 ಯೋಜನೆಯಡಿ ರಾಜ್ಯಾದ್ಯಂತ 54 ಕೇಂದ್ರಗಳಲ್ಲಿ 9.24 ಲಕ್ಷ ಮೆ.ಟನ್ ಸಾಮರ್ಥ್ಯದ ಉಗ್ರಾಣ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರ ಪೈಕಿ 4.70 ಲಕ್ಷ ಮೆ.ಟನ್ ಸಾಮರ್ಥ್ಯದ ಉಗ್ರಾಣಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗೆ ಸಂಬಂಧಿಸಿದಂತೆ 40 ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಉಳಿದ 49 ಕೇಂದ್ರಗಳಲ್ಲಿ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಗುತ್ತಿಗೆದಾರರಾದ M/s Soma Enterprises Limited ರವರು ಜೂನ್ 2019 ರಿಂದ ಹಣ ಪಾವತಿಯಾಗುತ್ತಿಲ್ಲವೆಂಬ ಕಾರಣಕ್ಕಾಗಿ ಕಾಮಗಾರಿಗಳನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿರುತ್ತಾರೆ.

ಕಾರ್ಯಗತಗೊಳಿಸಲಾಗಿರುವ ಕಾಮಗಾರಿ ಪ್ರಮಾಣ ರೂ.678.51 ಕೋಟಿಗಳಾಗಿದ್ದು, ಕಾರ್ಯಾದೇಶದ ಪ್ರಕಾರ ಮಾಡಬೇಕಾದ ಬಾಕಿ ಕಾಮಗಾರಿ ರೂ. 183.86 ಕೋಟಿಗಳು ಎಂಬುದಾಗಿ ಲೋಕೋಪಯೋಗಿ ಇಲಾಖೆಯ ಇಂಜನಿಯರ್‌ರವರು ಪ್ರಮಾಣೀಕರಿಸಿದ್ದು, ಒಪ್ಪಂದ ಸಮಯದಲ್ಲಿ ಜಾರಿಯಲ್ಲಿದ್ದ ಷೆಡ್ಯೂಲ್ ದರಗಳ ಪ್ರಕಾರ ಯೋಜನೆಯ ಪರಿಷ್ಕೃತ ಅಂದಾಜು ರೂ.862.37 ಕೋಟಿಗಳಾಗುತ್ತದೆ. ಸದರಿ ಅಂದಾಜುಗಳನ್ನು ಲೋಕೋಪಯೋಗಿ ಇಲಾಖೆಯ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಮತ್ತು ಅಂದಾಜು ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗಿ, ಸದರಿ ಸಮಿತಿಯು ಪರಿಷ್ಕೃತ ಅಂದಾಜು ಪಟ್ಟಿಯು ಕ್ರಮಬದ್ಧವಾಗಿರುವುದಾಗಿ ತಿಳಿಸಿರುತ್ತದೆ.

ಬಿಲ್ಲು ಪಾವತಿಯ ವಿಳಂಬದ ಕಾರಣದಿಂದಾಗಿ ಟೆಂಡರ್ ನಿಯಮಗಳ ಪ್ರಕಾರ 434.95 ಕೋಟಿ ರೂಪಾಯಿ ಕ್ಲೇಮ್ ಮಾಡಿ ಗುತ್ತಿಗೆದಾರರು ದಿನಾಂಕ: 28.01.2019 ರಲ್ಲಿ ಮಧ್ಯಸ್ಥಿಕೆ Arbitation Clause ನ ಪ್ರಕಾರ ಪ್ರಕರಣ ದಾಖಲಿಸಿರುತ್ತಾರೆ.

ದಿನಾಂಕ: 10.06.2021 ರಂದು ಆರ್ಬಿಟ್ರೇಷನ್ ಟ್ರಿಬ್ಯುನಲ್ ಅವಾರ್ಡ್ ನೀಡಿದ್ದು, ಅದರಂತೆ, ದರ ಹೆಚ್ಚುವರಿ (ಪ್ರೈಸ್ ಎಸ್ಕಲೇಷನ್) ಮತ್ತು ಬಡ್ಡಿಗೆ ಸಂಬಂದಿಸಿದಂತೆ, ಗುತ್ತಿಗೆದಾರರಿಗೆ ನಿಗಮದಿಂದ ಪಾವತಿಸಲು ಆದೇಶಿಸಿದ್ದು, ಸದರಿ ಅವಾರ್ಡ್ ಅನ್ನು ನಿಗಮವು ಮಾನ್ಯ ವಾಣಿಜ್ಯ ನ್ಯಾಯಾಲಯ, ಬೆಂಗಳೂರು ಇಲ್ಲಿ ಪಶ್ನಿಸಿದ್ದು, ನ್ಯಾಯಾಲಯವು ಅವಾರ್ಡ್‌ಗೆ ತಡೆಯಾಜ್ಞೆ ನೀಡಿರುತ್ತದೆ. ಪ್ರಕರಣದ ವಿಚಾರಣೆ ಬಾಕಿ ಇರುತ್ತದೆ.

ಒಂದು ಕಡೆ ಅಪೂರ್ಣವಾಗಿರುವ ಈ ಯೋಜನೆಯಲ್ಲಿ ನಬಾರ್ಡ್‌ಗೆ ಹೆಚ್ಚಿನ ಮೊತ್ತದ ಸಾಲ ಹಿಂತಿರುಗಿಸಬೇಕಾಗಿದ್ದು, ಇನ್ನೊಂದು ಕಡೆ ವಿವಾದವು ಮಧ್ಯಸ್ಥಿಕೆಯಲ್ಲಿ ಇತ್ಯರ್ಥವಾದ ನಂತರ ಅಥವಾ ಬೇರೆ ರೀತಿ ತೀರ್ಮಾನವಾದ ನಂತರ ಮಾತ್ರವೇ ಕಾಮಗಾರಿಯನ್ನು ಮುಂದುವರೆಸಲು ಗುತ್ತಿಗೆದಾರರಿಗೆ ಅನುಮತಿಸಬೇಕೆಂದು ಕಾನೂನು ಅಭಿಪ್ರಾಯವು ನಿಗಮದ ಮೇಲೆ ನಿರ್ಬಂಧ ಹೇರಿದೆ. ಏತನ್ಮಧ್ಯೆ ವರ್ಕ್‌ಸ್ಲಿಪ್ ಮತ್ತು ಇ.ಐ.ಆರ್.ಎಲ್. ನಿಂದಾಗಿ ಯೋಜನಾ ವೆಚ್ಚವು ರೂ.862.37 ಕೋಟಿಗಳಿಗೆ ಹೆಚ್ಚುವರಿಯಾಗಿರುತ್ತದೆ. ಈವರೆಗೂ ಗುತ್ತಿಗೆದಾರರಿಗೆ ರೂ.612.18 ಕೋಟಿ ಸಂದಾಯ ಮಾಡಲಾಗಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ನಿಗಮದ ಬಳಿ ಹಣದ ಕೊರತೆ ಉಂಟಾಗಿರುತ್ತದೆ.

ನಬಾರ್ಡ್‌ನಿಂದ ತೆಗೆದುಕೊಳ್ಳಲಾದ ಸಾಲವನ್ನು ಮರುಪಾವತಿ ಮಾಡಲು ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ರೂ. 95.51 ಕೋಟಿಗಳ ಹಣಕಾಸು ನೆರವನ್ನು ಸಾಲದ ರೂಪದಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುತ್ತದೆ.

ಪರಿಷ್ಕೃತ ಅಂದಾಜುಗಳ ಪ್ರಕಾರ ಯೋಜನೆಯನ್ನು ಪೂರ್ಣಗೊಳಿಸುವ ಸಂಬಂಧ ಕಾರ್ಯಾದೇಶದ ಪ್ರಕಾರ ರೂ. 250.20 ಕೋಟಿಗಳ ಅವಶ್ಯಕತೆ ಇರುತ್ತದೆ. ಅದರ ಜೊತೆಗೆ ಅರ್ಬಿಟ್ರೇಷನ್ ಅವಾರ್ಡ್ ಪ್ರಕಾರ ಹೆಚ್ಚುವರಿ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸಬೇಕಿರುತ್ತದೆ.

CO 17 WHC 2022

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು